ಶಿವಮೊಗ್ಗ ಜಿಲ್ಲೆಗೆ ಮುಜರಾಯಿ ಇಲಾಖೆಯಿಂದ ಮಂಜೂರಾದ ಹಣ

1245(1959) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಶಿವಮೊಗ್ಗ ಜಿಲ್ಲೆಗೆ ಮುಜರಾಯಿ ಇಲಾಖೆಯಿಂದ ಮಂಜೂರಾದ ಹಣವೆಷ್ಟು?

2) ಶಿಕಾರಿಪುರ ತಾಲ್ಲೂಕು ಹಾಗೂ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು?

ಶ್ರೀಮತಿ ಸುಮಾ ವಸಂತ್(ಮುಜರಾಯಿ ರಾಜ್ಯ ಸಚಿವರು):

1) ಶಿವಮೊಗ್ಗ ಜಿಲ್ಲೆಗೆ 2001-2002ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರು ಮಾಡಲಾಗಿದೆ.

ಯೋಜನೆ	ಧಾರ್ಮಿಕ ಸಂಸ್ಥೆಯ ಸಂಖ್ಯೆ	ಮಂಜೂರಾದ ಮೊತ್ತ
ದುರಸ್ಥಿ	14	ರೂ. 3,15,000-00
ನಿರ್ಮಾಣ	25	ರೂ. 4,85,000-00
ಆರಾಧನಾ	ವಿಧಾನ ಸಭಾ ಕ್ಷೇತ್ರವಾರು	ರೂ. 16,96,968-00

2) ಶಿಕಾರಿ ಹಾಗೂ ಶಿವಮೊಗ್ಗ ಜಿಲ್ಲೆಯ ಇತರೆ ತಾಲ್ಲೂಕಿಗೆ ಮಂಜೂರಾದ ಹಣದ ವಿವರ ಕೆಳಕಂಡಂತಿದೆ.

ತಾಲ್ಲೂಕು	ಜೀರ್ಣೋದ್ಧಾರ	ಸಂಸ್ಥೆ	ನಿರ್ಮಾಣ	ಸಂಸ್ಥೆ
1. ಶಿಕಾರಿಪುರ	ಇಲ್ಲ	-	50,000-00	1
2. ಸಾಗರ	70,000-00	3	1,45,000-00	8
3. ಶಿವಮೊಗ್ಗ	45,000-00	2	60,000-00	3
4. ಭದ್ರಾವತಿ	50,000-00	3	90,000-00	8
5. ತೀರ್ಥಹಳ್ಳಿ	40,000-00	2	55,000-00	2
6. ಸೊರಬ	25,000-00	1	45,000-00	2
7. ಹೊಸನಗರ	85,000-00	3	30,000-00	1
ಒಟ್ಟು	**3,15,000-00**	**14**	**4,75,000-00**	**25**

ಆರಾಧನಾ ಯೋಜನೆಯಡಿ ಅನುದಾನವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಬರುವ 8 ವಿಧಾನ ಸಭಾ ಕ್ಷೇತ್ರಕ್ಕೆ ಒಟ್ಟು ರೂ. 16,96,968-00ಗಳನ್ನು ಮಂಜೂರು ಮಾಡಿದೆ.

ಗಡಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮ

1246(1220) ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಡೀ ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸರ್ಕಾರ ಪ್ರಾರಂಭದಿಂದ ಮಂಜೂರು ಮಾಡಿದ ಹಣದ ವಿವರ ನೀಡುವುದು?(ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ಕಾರ್ಯಕ್ರಮಕ್ಕೆ ನಿಗಧಿ ಮಾಡಿದ ಹಣವೆಷ್ಟು, ಬಿಡುಗಡೆ ಮಾಡಿದ ಹಣವೆಷ್ಟು?(ವರ್ಷವಾರು ಮಾಹಿತಿ ನೀಡುವುದು)

ಇ) ಈ ಹಣದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ?(ವಿವರ ನೀಡುವುದು)